58

## ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರ ಜಿಲ್ಲೆ, ಕೋಲಾರ

ದಿನಾಂಕ: 19/10/2016

ಪ್ರಕರಣ ಸಂಖ್ಯೆ: ಆರ್‌ಎ.103/2014-15

ಉಪಸ್ಥಿತರು: ಡಾ॥ ಕೆ.ವಿ.ತ್ರಿಲೋಕ್ ಚಂದ್ರ ಭಾ.ಆ.ಸೇ.,
ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

| ಮೇಲ್ಮನವಿದಾರರು | ವಿರುದ್ಧ | ಎದುರುದಾರರು |
|---|---|---|
| 1. ನಾರಾಯಣಸ್ವಾಮಿ<br>ಬಿನ್ ಮುನಿಯಪ್ಪ<br>ಜಯಮಂಗಲ ಗ್ರಾಮ<br>ಲಕ್ಕೂರು ಹೋಬಳಿ<br>ಮಾಲೂರು ತಾಲ್ಲೂಕು<br>( ಶ್ರೀ ಜಿ.ಶ್ರೀನಿವಾಸ್<br>- ವಕೀಲರು ರವರಿಂದ ) | | 1. ಸಹಾಯಕ ಕಮೀಷನರ್<br>ಕೋಲಾರ ಉಪವಿಭಾಗ<br>2. ತಹಶೀಲ್ದಾರ್<br>ಮಾಲೂರು ತಾಲ್ಲೂಕು<br>3. ವಿ.ಕೃಷ್ಣಪ್ಪ ಬಿನ್ ವೆಂಕಟೇಶಪ್ಪ<br>4. ಶ್ರೀಮತಿ ಲಕ್ಷ್ಮಮ್ಮ<br>ಕೋಂ ವೆಂಕಟೇಶಪ್ಪ<br>5. ಶ್ರೀಮತಿ ವಿಮಲಮ್ಮ<br>ಬಿನ್ ವೆಂಕಟೇಶಪ್ಪ<br>-ಕ್ರಸಂ 3 ರಿಂದ 5 ವಾಸ<br>ಜಯಮಂಗಲ ಗ್ರಾಮ<br>ಲಕ್ಕೂರು ಹೋಬಳಿ<br>ಮಾಲೂರು ತಾಲ್ಲೂಕು<br>( ಶ್ರೀ ಬಿ.ಆರ್.ರವೀಂದ್ರ<br>-ವಕೀಲರು, ರವರಿಂದ) |

ವಿಷಯ: ಸಹಾಯಕ ಕಮೀಷನರ್ ಕೋಲಾರ ಉಪವಿಭಾಗ, ಕೋಲಾರ ರವರ ಕ್ರಮಾಂಕ: ಆರ್ ಎ 16/2010-11 ದಿನಾಂಕ:31-01-2015 ರ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

0-0-0

**ಪ್ರಸ್ತಾವನೆ.**

ಈ ಮೇಲ್ಮನವಿ ಅರ್ಜಿಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 136(3) ಓದಲಾದ ಕಲಂ 50 ರಂತೆ ಸಲ್ಲಿಸಿರುತ್ತಾರೆ.

**ಪ್ರಕರಣದ ಸಂಕ್ಷಿಪ್ತ ವಿವರ,**

1. ಮಾಲೂರು ತಾಲ್ಲೂಕು ಲಕ್ಕೂರು ಹೋಬಳಿ ಜಯಮಂಗಲ ಗ್ರಾಮದ 73/4 ರಲ್ಲಿ 1-30 ಎಕರೆ ಜಮೀನು ತಿರುಪತಿ ಮುನಿಯಪ್ಪ ರವರ ಹೆಸರಿಗೆ ಖಾತೆ ಇದ್ದು, ಸದರಿ ಜಮೀನನ್ನು ತಿರುಪತಿ ಮುನಿಯಪ್ಪನ ಮೊಮ್ಮಗನಾದ ವಿ.ಕೃಷ್ಣಪ್ಪ ಬಿನ್ ವೆಂಕಟೇಶಪ್ಪ ರವರು ತನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಲು ಕೋರಿ ತಹಶೀಲ್ದಾರ್, ಮಾಲೂರು ತಾಲ್ಲೂಕು ರವರಿಗೆ ಅರ್ಜಿ ನೀಡಿದ್ದು, ಇದರ ವಿರುದ್ಧ ಕಲಾವತಿ ಕೋಂ ಲೇಟ್ ಶ್ರೀನಿವಾಸ್ ರವರು ತಕರಾರು ಸಲ್ಲಿಸಿದ ಮೇರೆಗೆ, ತಹಶೀಲ್ದಾರರು ಸಂಖ್ಯೆ:ಆರ್‌ಆರ್‌ಟಿ/ಸಿಆರ್/289/2009-10 ರಂತೆ ವಿವಾದಾಸ್ಪದ ಪ್ರಕರಣವನ್ನಾಗಿ ದಾಖಲಿಸಿಕೊಂಡು ವಿಚಾರಣೆ ನಂತರ ದಿನಾಂಕ:05/04/2010 ರಂದು ಮೂಲ ಖಾತೇದಾರರ ಸೊಸೆಯಾದ ಶ್ರೀಮತಿ ಲಕ್ಷ್ಮಮ್ಮ ಕೋಂ ಲೇಟ್ ವೆಂಕಟೇಶಪ್ಪ ರವರ ಹೆಸರಿಗೆ ಖಾತೆ ಬದಲಾವಣೆ ಮಾಡಲು ಆದೇಶಿಸಿರುತ್ತಾರೆ.

...2

ಪತ್ರದ ಸಂಖ್ಯೆ:1103 ರಂತೆ ನೋಂದಾಯಿತ ಕ್ರಯದ ಮೂಲಕ ಪಡೆದಿರುವುದಾಗಿ ತಿಳಿಸಿರುತ್ತಾರೆ. ತಿರುಪತಿ ಮುನಿಯಪ್ಪ ರವರು ದಿನಾಂಕ:05/07/1962 ರಂದು ನಿಧನರಾದ ನಂತರ ವಿವಾದಿತ ಸ.ನಂ. 73/4 ರಲ್ಲಿನ 1-00 ಎಕರೆ ಜಮೀನು ಲಕ್ಷ್ಮಮ್ಮ ರವರ ಹೆಸರಿಗೆ ಖಾತೆಯಾಗಿರುತ್ತದೆ ಎಂದು ಉಳಿಕೆ 1-30 ಎಕರೆ ಜಮೀನು ತಿರುಪತಿ ಮುನಿಯಪ್ಪ ರವರ ಹೆಸರಿನಲ್ಲಿದ್ದ ಜಮೀನನ್ನು ಇವರ ತಾಯಿ ಲಕ್ಷ್ಮಮ್ಮ ಕೋಂ ವೆಂಕಟೇಶಪ್ಪ ರವರಿಗೆ ಎಂ.ಆರ್ ನಂ.31/2009-10 ರಂತೆ ಹಕ್ಕು ಬದಲಾವಣೆಯಾಗಿರುತ್ತದೆ. ಇವರು ನೋಂದಾಯಿತ ಪತ್ರ ದಿನಾಂಕ:21/05/2010 ರಂದು 5ನೇ ಮೇಲ್ಮನವಿದಾರರಾದ ಶ್ರೀಮತಿ ವಿಮಲಮ್ಮ ರವರಿಗೆ ದಾನ ಮಾಡಿರುವುದಾಗಿ ತಿಳಿಸಿರುತ್ತಾರೆ. ಕಲಾವತಿಯವರಿಗೂ, ಮೇಲ್ಮನವಿದಾರರಿಗೂ, ವಿವಾದಿತ ಜಮೀನಿಗೂ ಯಾವುದೇ ಸಂಬಂಧ ಇರುವುದಿಲ್ಲವೆಂದು ಹಾಗೂ ಕಲಾವತಿ ರವರು ಸಿವಿಲ್ ನ್ಯಾಯಾಲಯದಲ್ಲಿ ಹೂಡಿದ್ದ ನಂ. ಓ.ಎಸ್ 395/2010 ರ ದಾವೆಯು ವಜಾಗೊಂಡಿರುವುದಾಗಿ ವಾದಿಸಿ ಮೇಲ್ಮನವಿದಾರರ ಅರ್ಜಿಯನ್ನು ವಜಾಮಾಡಬೇಕೆಂದು ಕೋರಿರುತ್ತಾರೆ.

5. ಉಭಯತ್ರರು ನಿವೇದಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಶ್ನಿತ ಆದೇಶ ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಅವಲೋಕಿಸುತ್ತಾ, ಮಾಲೂರು ತಾಲ್ಲೂಕು ಲಕ್ಕೂರು ಹೋಬಳಿ ಜಯಮಂಗಲ ಗ್ರಾಮದ ಸ.ನಂ. 73/4 ರಲ್ಲಿ 2-32 ಎಕರೆ 0-02 ಗುಂಟೆ ಖರಾಬು ಸೇರಿ ಜಮೀನು ಮುನಿಯಪ್ಪ ಬಿನ್ ವೆಂಕಟೇಶಪ್ಪ ರವರಿಂದ ಎಂ.ಕೃಷ್ಣಪ್ಪ ರವರಿಗೆ ನೊಂದಾಯಿತ ಪತ್ರ ಸಂಖ್ಯೆ. 1245/68-69 ರಂತೆ ಕ್ರಯ ಆಗಿರುತ್ತೆ. ನಂತರ ಸದರಿ ಎಂ.ಕೃಷ್ಣಪ್ಪ ರವರು ಪಿಳ್ಳಪ್ಪ ರವರಿಗೆ ಸಂಖ್ಯೆ:2425/68-69 ರಂತೆ 1-30 ಎಕರೆ ಜಮೀನನ್ನು ಮತ್ತು ಉಳಿಕೆ 1-00 ಎಕರೆ ಜಮೀನನ್ನು ಪತ್ರ ಸಂಖ್ಯೆ:2088/77-78 ರಂತೆ ತಿಮ್ಮಮ್ಮ ರವರಿಗೆ ಕ್ರಯಕ್ಕೆ ನೀಡಿರುತ್ತಾರೆ. ಪಿಳ್ಳಪ್ಪ ರವರು ತಾನು ಕ್ರಯಕ್ಕೆ ಪಡೆದಿದ್ದ 1-30 ಎಕರೆ ಜಮೀನನ್ನು ಮುನಿಯಮ್ಮ ಕೋಂ ಹೆಚ್.ವಿ.ಲಕ್ಷ್ಮಯ್ಯ ರವರಿಗೆ ನೋಂದಯಿತ ಪತ್ರ ಸಂಖ್ಯೆ:2009/69-70 ರಂತೆ ಮಾರಾಟ ಮಾಡಿರುತ್ತಾರೆ. ತಿಮ್ಮಮ್ಮ ರವರು ತಾವು ಕ್ರಯದ ಮೂಲಕ ಪಡೆದ 1-00 ಎಕರೆ ಜಮೀನನ್ನು ಲಕ್ಷ್ಮಮ್ಮ ಕೋಂ ವೆಂಕಟೇಶಪ್ಪ ರವರಿಗೆ ನೊಂದಾಯಿತ ಪತ್ರ ಸಂಖ್ಯೆ:1055/93-94 ರಂತೆ ಕ್ರಯ ಮಾಡಿಕೊಟ್ಟಿರುತ್ತಾರೆ.

3ನೇ ಪ್ರತಿವಾದಿಯು ತಮ್ಮ ಲಿಖಿತ ಆಕ್ಷೇಪಣೆಯಲ್ಲಿ ತಿರುಪತಿ ಮುನಿಯಪ್ಪ ರವರ ಫವತಿ ನಂತರ 1-00 ಎಕರೆ ಜಮೀನನ್ನು ತಮ್ಮ ತಾಯಿಯಾದ ಲಕ್ಷ್ಮಮ್ಮ ರವರಿಗೆ ಖಾತೆಯಾಗಿರುವುದಾಗಿ ತಿಳಿಸಿರುತ್ತಾರೆ. ಆದರೆ ಲಕ್ಷ್ಮಮ್ಮ ರವರಿಗೆ 2-30 ಎಕರೆ ಬದಲಾಗಿ 1-00 ಎಕರೆ ಮಾತ್ರ ಖಾತೆ ಮಾಡಿರುವುದು ಕಂಡು ಬರುತ್ತದೆ. ಫವತಿವಾರಸು ಖಾತೆ ಮಾಡಬೇಕಾದರೆ ಫವತಿ ಖಾತೇದಾರರ ಹೆಸರಿನಲ್ಲಿ ಇರುವ ಪೂರಾ ವಿಸ್ತೀರ್ಣವನ್ನು ಖಾತೆ ಮಾಡಬೇಕೆ ಹೊರತು ಭಾಗಶಃ ವಿಸ್ತೀರ್ಣವಲ್ಲ. ಆದ್ದರಿಂದ 3ನೇ ಪ್ರತಿವಾದಿಯ ವಾದದಲ್ಲಿ ಯಾವುದೇ ನೈಜತೆ ಕಂಡುಬರುವುದಿಲ್ಲ. ಬದಲಿಗೆ ಲಕ್ಷ್ಮಮ್ಮ ಕೋಂ ವೆಂಕಟೇಶಪ್ಪ ರವರಿಗೆ ಕ್ರಯದ ಮೂಲಕ 1-00 ಎಕರೆ ಹಕ್ಕು ಬಾದ್ಯವಾಗಿರುವುದು ದಾಖಲೆಗಳಿಂದ ದೃಢಪಡುತ್ತದೆ. ಹಾಗೂ ಉಳಿದ 1-30 ಎಕರೆ ಜಮೀನು ಸಹಾ ಮುನಿಯಪ್ಪ ರವರು ಕ್ರಯ ಮಾಡಿರುವುದು ದಾಖಲೆಗಳಿಂದ ದೃಢಪಡುತ್ತದೆ. ಕ್ರಯ ಪತ್ರಗಳ ಮಾನ್ಯತೆ ಬಗ್ಗೆ ನಿರ್ಣಯಿಸುವ ಅಧಿಕಾರ ಕಂದಾಯ ನ್ಯಾಯಾಲಯಗಳ ವ್ಯಾಪ್ತಿಗೆ ಒಳಪಡುವುದಿಲ್ಲ ಅಂತಹ ಅಧಿಕಾರ ಸಿವಿಲ್ ನ್ಯಾಯಾಲಯಕ್ಕೆ ಮಾತ್ರ ಇರುತ್ತದೆ.

...4

ತಹಶೀಲ್ದಾರರ ಈ ಆದೇಶದ ವಿರುದ್ಧ ಕಲಾವತಿ ಕೋಂ ಲೇಟ್ ಶ್ರೀನಿವಾಸ ರವರು ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರ ಮೇರೆಗೆ ನಂ: ಆರ್‌ಎ 16/2010-11 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ವಿಚಾರಣೆ ನಂತರ ದಿನಾಂಕ:31/01/2015 ರಂದು ಹೊರಡಿಸಿದ ಆದೇಶದಲ್ಲಿ ಮೇಲ್ಮನವಿ ಅರ್ಜಿಯನ್ನು ವಜಾಕರಿಸಿ ಆದೇಶಿಸಿರುತ್ತಾರೆ. ಸಹಾಯಕ ಕಮೀಷನರ್ ರವರ ಈ ಆದೇಶದಿಂದ ಬಾದಿತರಾದ ಮೇಲ್ಮನವಿದಾರರು ಈ ನ್ಯಾಯಾಲಯದಲ್ಲಿ ಪ್ರಸ್ತುತ ಮೇಲ್ಮನವಿ ಸಲ್ಲಿಸಿರುತ್ತಾರೆ. ಉಭಯತ್ರರಿಗೂ ನೋಟೀಸು ನೀಡಿ ವಿಚಾರಣೆ ನಡೆಸಲಾಯ್ತು.

2. ದಿನಾಂಕ:30/09/2015 ರಂದು ಉಭಯತ್ರರು ಹಾಜರು, 3ನೇ ಮತ್ತು 5ನೇ ಎದುರುದಾರರ ಪರವಾಗಿ ವಕೀಲರು ವಕಾಲತ್ ಮತ್ತು ಆಕ್ಷೇಪಣೆ ಹಾಗೂ ಲಿಖಿತ ವಾದಗಳನ್ನು ಸಲ್ಲಿಸಿರುತ್ತಾರೆ. ಮೇಲ್ಮನವಿದಾರರಿಗೆ ವಾದ ಮಂಡಿಸಲು ಕಾಲಾವಕಾಶ ನೀಡಿ ಪ್ರಕರಣವನ್ನು ಮುಂದೂಡಲಾಯ್ತು. ನಂತರ ದಿನಾಂಕ:21/10/2015 ರಂದು ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಂಡಾಗ ಉಭಯತ್ರರು ಹಾಜರು ಪ್ರಕರಣವನ್ನು ಆದೇಶಕ್ಕಾಗಿ ಕಾದಿರಿಸಲಾಯ್ತು.

3. ಮೇಲ್ಮನವಿದಾರರು ಲಿಖಿತ ವಾದವನ್ನು ಮಂಡಿಸಿರುವುದಿಲ್ಲ. ಆದ್ದರಿಂದ ಅವರ ಮೇಲ್ಮನವಿ ಅರ್ಜಿಯನ್ನು ಪರಿಗಣಿಸಲಾಯತು. ಮಾಲೂರು ತಾಲ್ಲೂಕು ಲಕ್ಕೂರು ಹೋಬಳಿ ಜಯಮಂಗಲ ಗ್ರಾಮದ ಸ.ನಂ. 73/4 ರಲ್ಲಿ 1-30 ಎಕರೆ ಜಮೀನನ್ನು ಮೇಲ್ಮನವಿದಾರರ ಅಜ್ಜಿ ರವರು ದಿನಾಂಕ:09/11/1968 ರಂದು ಪಿಳ್ಳಪ್ಪ (ಅ) ದೊಡ್ಡಪಿಳ್ಳಪ್ಪ ರವರಿಂದ ನೋಂದಾಯಿತ ಕ್ರಯದ ಮೂಲಕ ಪಡೆದಿರುತ್ತಾರೆಂದು, ಅಂದಿನಿಂದ ಸದರಿ ಜಮೀನಿನಲ್ಲಿ ಮೇಲ್ಮನವಿದಾರರು, ಅವರ ಸಹೋದರಿ ಮತ್ತು ಅವರ ಅಜ್ಜಿ ರವರುಗಳು ಸ್ವಾಧೀನಾನುಭವದಲ್ಲಿರುತ್ತಾರೆಂದು ತಿಳಿಸಿರುತ್ತಾರೆ. ಮೇಲ್ಮನವಿದಾರರ ಅಜ್ಜಿ ರವರು ಅನಕ್ಷರಸ್ಥರಾಗಿದ್ದು ಕ್ರಯ ಪತ್ರದಂತೆ ಖಾತೆ ಬದಲಾವಣೆ ಮಾಡಿಸಿಕೊಂಡಿರುವುದಿಲ್ಲವೆಂದು ವಾದಿಸಿರುತ್ತಾರೆ, ವಿವಾದಿತ ಜಮೀನಿನ ಹಕ್ಕು ಘೋಷಣೆಗಾಗಿ (Declaration of title) ಮಾನ್ಯ ಪ್ರಿನ್ಸಿಪಲ್ ಸಿವಿಲ್ ಜಡ್ಜ್ (ಕಿರಿಯ ವಿಭಾಗ), ಮಾಲೂರು ರವರ ನ್ಯಾಯಾಲಯದಲ್ಲಿ ನಂ. ಓ.ಎಸ್ 395/2010 ರಂತೆ ಮೇಲ್ಮನವಿದಾರರು ದಾವೆ ಹೂಡಿರುವುದಾಗಿ ನಿವೇದಿಸಿರುತ್ತಾರೆ. ಹೀಗಿರುವಾಗ 1 ಮತ್ತು 2ನೇ ಎದುರುದಾರರು ಮೇಲ್ಮನವಿದಾರರು ಮತ್ತು ಅವರ ಅಜ್ಜಿ ರವರ ಹಕ್ಕುಗಳ ಬಗ್ಗೆ ಪರಿಗಣಿಸದೇ ಪ್ರಶ್ನಿತ ಹಕ್ಕು ಬದಲಾವಣೆ ಮಾಡಿರುವುದು ಕಾನೂನು ಬಾಹಿರವೆಂದು ಹಾಗೂ ವಿವಾದಿತ ಜಮೀನಿನ ಸಂಬಂಧ ಸಹಾಯಕ ಕಮೀಷನರ್, ರವರ ನ್ಯಾಯಾಲಯದಲ್ಲಿ ನಂ.ಆರ್‌ಎ 16/2010-11 ರಂತೆ ಪ್ರಕರಣ ದಾಖಲಾಗಿದ್ದು, ವಿಚಾರಣಾ ಹಂತದಲ್ಲಿ ಬಾಕಿ ಇರುವಾಗಲೇ 4ನೇ ಎದುರುದಾರರು 5ನೇ ಎದುರುದಾರರಿಗೆ ದಾನಪತ್ರ ಮಾಡಿರುವುದು ಕಾನೂನು ಬಾಹಿರವಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸದೇ ಮಾಡಿರುವ ಪ್ರಶ್ನಿತ ಸಹಾಯಕ ಕಮೀಷನರ್ ರವರ ಆದೇಶವು ನ್ಯಾಯಬಾಹಿರವೆಂದು ವಾದಿಸಿ, ಪ್ರಶ್ನಿತ ಆದೇಶವನ್ನು ರದ್ದುಪಡಿಸುವ ಮೂಲಕ ತಮ್ಮ ಮೇಲ್ಮನವಿಯನ್ನು ಪುರಸ್ಕರಿಸುವಂತೆ ಕೋರಿರುತ್ತಾರೆ.

4. 3 ಮತ್ತು 5ನೇ ಎದುರುದಾರರು ಸಲ್ಲಿಸಿರುವ ಲಿಖಿತ ವಾದ ಹಾಗೂ ಆಕ್ಷೇಪಣೆಯಲ್ಲಿ ಜಯಮಂಗಲ ಗ್ರಾಮದ ಸ.ನಂ. 73/4 ರಲ್ಲಿ 0-02 ಗುಂಟೆ ಖರಾಬು ಸೇರಿ ಒಟ್ಟು 2 ಎಕರೆ 32 ಗುಂಟೆ ಜಮೀನು ಮೂಲತಃ ತಮ್ಮ ತಾತ ತಿರುಪತಿ ಮುನಿಯಪ್ಪ ರವರಿಗೆ ಸೇರಿದ್ದಾಗಿರುತ್ತದೆಂದು ತಿಳಿಸಿರುತ್ತಾರೆ. ತಿರುಪತಿ ಮುನಿಯಪ್ಪ ರವರು ತೋಟಿ ಮುನಿಗ ರವರಿಂದ ದಿನಾಂಕ:11/03/1930 ರಂದು

...3